# ಕೆರೆಗಳ ನಂಟ ನೀರಗಂಟಿ

ಊರಿನ ಕೆಲಸಕಾರ್ಯಗಳನ್ನು ನಿರ್ವಹಿಸಲು ಗ್ರಾಮೀಣರು ರೂಪಿಸಿಕೊಂಡಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ನೀರಗಂಟಿಗೆ ಮಹತ್ವದ ಪಾತ್ರವಿದೆ. ಕೆರೆ ಮತ್ತು ಅದರಲ್ಲಿನ ನೀರಿನ ನಿರ್ವಹಣೆ ಅವರಿಗೆ ಸೇರಿದ್ದು. ಕೆರೆಯ ಏರಿಯಲ್ಲಿ ಸಮಸ್ಯೆ ಕಾಣಿಸಿಕೊಂಡರೆ, ನೀರಗಂಟಿ ಜೀವದ ಹಂಗು ತೊರೆದು ಕೆರೆಗಿಳಿಯುತ್ತಾನೆ; ಏರಿಯನ್ನು ಬಲಪಡಿಸುತ್ತಾನೆ. ನೀರನ್ನು ರೈತರಿಗೆ ಸಮನಾಗಿ ಹಂಚುವ ಕೆಲಸವೂ ಆತನದೇ. ಪ್ರಸ್ತುತ ಕೆರೆಗಳಿಗೆ ಬರುವ ನೀರಿನ ಪ್ರಮಾಣ ಇಳಿಮುಖವಾಗಿದೆ; ನೀರಗಂಟಿಗಳ ಮಹತ್ವವೂ ಕಡಿಮೆಯಾಗಿದೆ. ಇರುವ ನೀರಗಂಟಿಗಳು ಬದುಕಿನ ಭದ್ರತೆ ಕಳೆದುಕೊಂಡು ಆತಂಕದಲ್ಲಿದ್ದಾರೆ.

■ ಸ್ವರೂಪಾನಂದ ಎಂ. ಕೊಟ್ಟೂರು

ಬಳ್ಳಾರಿಯ ಸಂಡೂರು ತಾಲ್ಲೂಕಿನ ಪುಟ್ಟ ಹಳ್ಳಿ ಚೋರನೂರು. ಊರಿನ ಪಾಲಿಗೆ ಅಕ್ಷಯಪಾತ್ರೆಯಂತಿದ್ದ ಕೆರೆಯಲ್ಲಿ ನೀರು ಜಿನುಗುತ್ತಿದೆ. ಊರಿನ ಜನರಿಗೆ ಆತಂಕ. ಹೀಗೇ ನೀರು ಸೋರಿದರೆ, ಮಣ್ಣು ಸಡಿಲವಾಗಿ ಕೆರೆ ಒಡೆಯಬಹುದು. ಹಾಗೇನಾದರೂ ಆದರೆ ಭಾರೀ ಅನಾಹುತ ಕಟ್ಟಿಟ್ಟ ಬುತ್ತಿ. ಸುದ್ದಿ ಕೂಡ್ಲಿಗಿಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಗೆ ಮುಟ್ಟಿತು. ನೀರು ಭರ್ತಿ ಆದ ಕೆರೆಯಲ್ಲಿ ಮುಳುಗಿ ಹೋರು ಬಿದ್ದ ಜಾಗ ಬೆದಕುವರ್‍ಯಾರು? ಆಗ ನೆನಪಾಗಿದ್ದು ಹನಸಿಯ ನೀರಗಂಟಿ ಚಂದ್ರಪ್ಪ. ಸತತ ಎರಡು ದಿನ ಚಂದ್ರಪ್ಪ ಹುಡುಕಾಟ ನಡೆಸಿದರು; ಹೋರು ಬಿದ್ದ ಜಾಗ ಗುರ್ತಿಸಿದರು. ಇಲಾಖೆ ಜೆಸಿಬಿಯಿಂದ ಹೋರು ಮುಚ್ಚಿಸಿ ಏರಿ ಭದ್ರಪಡಿಸಿತು. ಊರಿನ ಜನರಿಗೆ ನಿರಾಳ.

2020ರಲ್ಲಿ ರಾಜ್ಯ ಭಾರೀ ಮಳೆ ಕಂಡಿದೆ. ನಾಡಿನ ಅನೇಕ ಪ್ರದೇಶಗಳಲ್ಲಿ ಕೆರೆಕಟ್ಟೆಗಳು ತುಂಬಿವೆ. ಈ ಗಂಗಾವತರಣದೊಂದಿಗೆ, ಕೆರೆಗಳ ಏರಿಗಳಲ್ಲಿ ಕಂಡಿ ಉಂಟಾಗುವದು, ನೀರು ಪೋಲಾಗುವುದು, ತ್ಯಾಜ್ಯದಿಂದ ಕೆರೆ ತೂಬು ತುಂಬುವುದು – ಇಂಥ ಸಮಸ್ಯೆಗಳು ಅಲ್ಲಲ್ಲಿ ಕಾಣಿಸಿಕೊಂಡಿವೆ. ತತ್‌ಕ್ಷಣಕ್ಕೆ ಎದುರಾಗುವ ಈ ಸಮಸ್ಯೆಗಳನ್ನು ಕೂಡಲೇ ಪತ್ತೆ ಹಚ್ಚಿ ಅವುಗಳಿಗೆ ತುರ್ತು ಚಿಕಿತ್ಸೆ ನೀಡಬೇಕು. ಆದರೆ ಈ ಕೆಲಸ ಎಲ್ಲರಿಂದ ಸಾಧ್ಯವಿಲ್ಲ. ಕೆರೆಯ ನಾಡಿಮಿಡಿತ ಗೊತ್ತಿರುವವರಿಂದ ಮಾತ್ರ ಆ ಕೆಲಸ ಸಾಧ್ಯ. ಯಾರದು ಕೆರೆಯ ಮನಸ್ಸು ಬಲ್ಲವರು? ಅವರೇ ನೀರಗಂಟಿಗಳು. ಕೆರೆಯ ಏರಿಯ ರಕ್ಷಕರಾದ ಅವರನ್ನು 'ನೀರ ಸೇನಾನಿಗಳು' ಎಂದೂ ಕರೆಯಬಹುದು.

### ಕೆರೆಯ ನಂಟ ನೀರಗಂಟಿ

ದಶಕಗಳ ಹಿಂದೆ ಪ್ರತಿ ಕೆರೆಗೊಬ್ಬ ನೀರಗಂಟಿ ಇರುತ್ತಿದ್ದರು. ಇವರು ಬಾರಿಕರ ಜನಾಂಗದವರು. ಆಯಗಾರರಲ್ಲಿ ಒಬ್ಬರಾದ ಬಾರಿಕರು ಊರಿನ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಾರೆ. ನೀರಗಂಟಿ ಕೆಲಸ ಕೆರೆ ಏರಿಯ ಆರೋಗ್ಯ ನೋಡಿಕೊಳ್ಳುವುದು. ಕೆರೆಗೆ ನೀರು ಬಂದರೂ ಬಾರದಿದ್ದರೂ ಏರಿಯ ಮೇಲಿನ ಗಿಡಗಂಟೆಗಳನ್ನು ಕಿತ್ತು ಸ್ವಚ್ಛ ಮಾಡುವುದು ಅವರ ಕೆಲಸ. ಸಿಕ್ಕಾಪಟ್ಟೆ ಗಿಡ ಬೆಳೆದರೆ ಕೆರೆ ನಿರ್ವಹಣೆಯ ಜವಾಬ್ದಾರಿ ಹೊತ್ತವರಿಗೆ ವಿಷಯ ತಿಳಿಸಿ, ಜಂಗಲ್ ಕಟಿಂಗ್ ಮಾಡಿಸುತ್ತಾರೆ.

ಭರ್ಜರಿ ಮಳೆ ಆಗಿ ಹಳ್ಳಕೊಳ್ಳಗಳು ಭರ್ತಿ ಆಗಿ, ಕೆರೆ ಕಡೆಗೆ ನೀರು ಹರಿದು ಬರುತ್ತಿದೆ ಅಂದಾಕ್ಷಣ ನೀರಗಂಟಿಗಳು ಅಲರ್ಟ್ ಆಗುತ್ತಾರೆ. ನೀರಿನೊಟ್ಟಿಗೆ ಅವರೂ ಕೆರೆಯ ಕಡೆಗೆ ಧಾವಿಸುತ್ತಾರೆ. ಬಿಸಿಲ ದಿನಗಳಲ್ಲಿ ಕೆರೆ ಬರಿದಾಗಿ – ಇರುವೆ, ಗೊದ್ದ, ಏಡಿ, ಉಡಗಳು ಏರಿಯಲ್ಲಿ ಮಾಡಿದ ರಂಧ್ರಗಳನ್ನು ಹುಡುಕಿ ಮಣ್ಣು, ಮರಳು ತುಂಬುತ್ತಾರೆ. ಆದಾಗ್ಯೂ ಏರಿಗೆ ಹಾನಿ ಆಗುವಂತಿದ್ದರೆ, ಊರ ಜನರನ್ನು ಕರೆತಂದು ಏರಿ ಸರಿಪಡಿಸುತ್ತಾರೆ.

